## ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಎಂವೈಎಸ್\634\2014\ಉನಿವಿ-4

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:31/01/2018

### ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ದೂರುದಾರರಾದ ಶ್ರೀ.ಸಿ.ಎಸ್.ನಾಗೇಂದ್ರಕುಮಾರ್ ಬಿನ್ ಶಂಕರನಾರಾಯಣರಾವ್, ಚೇದರವಳ್ಳಿ ಅಂಚೆ, ಟಿ.ನರಸೀಪುರ ತಾಲ್ಲೂಕ್, ಮೈಸೂರು ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

**********

ಮೈಸೂರು ಜಿಲ್ಲೆ ಟಿ.ನರಸೀಪುರ ತಾಲ್ಲೂಕ್ ಚೇದರವಳ್ಳಿ ಅಂಚೆ ನಿವಾಸಿಯಾದ ಶ್ರೀ.ಸಿ.ಎಸ್.ನಾಗೇಂದ್ರಕುಮಾರ್ ಬಿನ್ ಶಂಕರನಾರಾಯಣ ರಾವ್ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಮೈಸೂರು ಜಿಲ್ಲೆ ಟಿ.ನರಸೀಪುರ ತಾಲ್ಲೂಕ್ ಬನ್ನೂರು ನಂ.5 ವಿಸಿ ಉಪವಿಭಾಗದ ಕಾವೇರಿ ನೀರಾವರಿ ನಿಗಮ ನಿಯಮಿತದ ಸಹಾಯಕ ಕಾರ್ಯಪಾಲಕ ಅಭಿಯಂತರ [ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿವೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ತಲಕಾಡು ಹೋಬಳಿ ಕುಕ್ಕೂರುಯಲ್ಲೆ ಗ್ರಾಮದ ಸರ್ವೆ ನಂ.40/2, 10/3, 38, 39 ಮತ್ತು 1290/2ರಲ್ಲಿ ಹಳೇ ಕುಕ್ಕೂರು ಗ್ರಾಮದ ಬಲ ಭಾಗದ ಕೆಲ ರೈತರು ಅನಧಿಕೃತ ತೂಬುಗಳನ್ನು ಅಳವಡಿಸಿಕೊಂಡಿರುತ್ತಾರೆಂದು ಶ್ರೀ.ಟಿ.ಸಿ.ದಾಸೇಗೌಡರು ದೂರು ನೀಡಿದ್ದು, ಸದರಿ ದೂರಿನ ಆಧಾರದ ಮೇಲೆ ಅನಧಿಕೃತ ತೂಬುಗಳನ್ನು ತೆರವುಗೊಳಿಸಿ ಎಂದು ಎದುರುದಾರರಿಗೆ ನೀಡಿರುವ ಆದೇಶವನ್ನು ಮರು ಪರಿಶೀಲನೆ ಮಾಡಿ, ನ್ಯಾಯ ದೊರಕಿಸ ಬೇಕೆಂದು ಕೋರಿದ್ದಾರೆ.

3. ದೂರಿನ ಬಗ್ಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ

ಆಕ್ಷೇಪಣೆಯಲ್ಲಿ-

ಶ್ರೀ.ಟಿ.ಸಿ.ದಾಸೇಗೌಡ ಬಿನ್ ಲೇ.ಚಿಕ್ಕರಂಗೇಗೌಡ ರವರು ಸಲ್ಲಿಸಿದ ದೂರು ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂವೈಎಸ್/5356/2012ರಲ್ಲಿ 5 ಜನರು ಅನಧಿಕೃತ ತೂಬುಗಳನ್ನು ಹಾಕಿಕೊಂಡಿರುವವರ ಮೇಲೆ ಕಾನೂನು ಕ್ರಮ ಕೈಗೊಂಡು ವರದಿ ಸಲ್ಲಿಸಲು ಈ ಸಂಸ್ಥೆಯು ಸೂಚಿಸಿದ್ದು, ಅದರಂತೆ ಆರಕ್ಷಕ ಉಪ ನಿರೀಕ್ಷಕರು, ತಲಕಾಡು ರವರಿಗೆ ದಿ:23/01/14ರಂದು ದೂರನ್ನು ನೀಡಿ ಸದರಿ 5 ಜನರ ಮೇಲೆ ಕಾನೂನು ಕ್ರಮ ಕೈಗೊಳ್ಳುವಂತೆ ಸೂಚಿಸಿದೆ. ಇದಕ್ಕೆ ಪ್ರತಿಯಾಗಿ ಈ ದೂರನ್ನು ಸಲ್ಲಿಸಿದೆ. ಶ್ರೀ.ಟಿ.ಸಿ.ದಾಸೇಗೌಡ ಬಿನ್ ಲೇ.ಚಿಕ್ಕರಂಗೇಗೌಡ ರವರು ಸಲ್ಲಿಸಿದ ದೂರಿಗೆ ಪ್ರತಿ ದೂರನ್ನು ದೂರುದಾರರು ಸಲ್ಲಿಸಿದ್ದಾರೆ. ಕುಕ್ಕೂರು ಗ್ರಾಮದ ಸರ್ವೆ ನಂ.10, 11, 13 ರಿಂದ 18, 39 ರಿಂದ 41 ಮತ್ತು 49 ಜಮೀನುಗಳನ್ನು ಹೊರತುಪಡಿಸಿ, ಇನ್ನುಳಿದ ಎಲ್ಲಾ ಜಮೀನುಗಳು ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಬಂದಿದೆ. ಸರ್ವೆ ನಂ.10/3, 13 ಮತ್ತು 11 ಜಮೀನುಗಳಲ್ಲಿ ಅನಧಿಕೃತವಾಗಿ ಪೈಪುಗಳನ್ನು ಅಳವಡಿಸಿ ನೀರನ್ನು ಪಡೆಯುತ್ತಿದ್ದಾರೆ. ಸರ್ವೆ ನಂ.14 ರಿಂದ 18, 39 ಮತ್ತು 49 ಜಮೀನಿನ ರೈತರು ಪಕ್ಕದ ಜಮೀನಿನ ಮುಖಾಂತರ ನೀರನ್ನು ಪಡೆಯುತ್ತಿದ್ದಾರೆಂದು ಹೇಳಿದ್ದಾರೆ.

4. ದೂರಿನ ಬಗ್ಗೆ ಕಾರ್ಯಪಾಲಕ ಅಭಿಯಂತರರು, ಕಾವೇರಿ ನೀರಾವರಿ ನಿಗಮ, ಬನ್ನೂರು ರವರಿಂದ ವರದಿಯನ್ನು ಕೇಳಲಾಗಿ, ಸದರಿಯವರು ತಮ್ಮ ವರದಿಯಲ್ಲಿ –

ದೂರು ಸಂಖ್ಯೆ:ಕಂಪ್ಲೆಂಟ್/ಉಪಲೋಕ್/ಎಂವೈಎಸ್/5356/2012ರಲ್ಲಿ ಸೂಚಿಸಿರುವಂತೆ ದೂರಿನ ಬಗ್ಗೆ ಸ್ಥಳ ಪರಿಶೀಲಿಸಿ, ಸಹಾಯಕ ಕಾರ್ಯಪಾಲಕ ಅಭಿಯಂತರರು ದಿ:12/10/12ರ ವರದಿಯಲ್ಲಿ, ದೂರುದಾರರು ದೂರಿರುವ ಸರ್ವೆ ನಂ.7, 8, 38, 39, 40 ಮತ್ತು 41ರಲ್ಲಿ ಇಲಾಖಾ ವತಿಯಿಂದ ಯಾವುದೇ ಹೊಸ ತೂಬುಗಳನ್ನು ಅಳವಡಿಸಿಲ್ಲ ಹಾಗೂ ನಾಲೆಯಲ್ಲಿರುವ ಪೈಪುಗಳು ಸುಮಾರು 35–40 ವರ್ಷಗಳಿಂದಲೂ ಇರುತ್ತವೆಂದು ಹೇಳಿದ್ದಾರೆ. ಸದರಿ ದೂರಿನಲ್ಲಿ ಆರಕ್ಷಕ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮೈಸೂರು ರವರು ತನಿಖೆ ಕೈಗೊಂಡು ಸಲ್ಲಿಸಿದ ತನಿಖಾ ವರದಿಯ ಆಧಾರದ ಮೇಲೆ 3ನೇ ಮೈಲಿಯಲ್ಲಿರುವ ನಾಲೆಗೆ 5 ಕಡೆ ಅನಧಿಕೃತ ತೂಬುಗಳನ್ನು ಹಾಕಿಕೊಂಡಿರುವ 5 ಜನ ರೈತರ ವಿರುದ್ಧ ಕಾನೂನು ಪ್ರಕಾರ ಕ್ರಮ ಕೈಗೊಂಡು ವರದಿ ಸಲ್ಲಿಸಲು ಸೂಚಿಸಿ ಹೊರಡಿಸಿದ ಆದೇಶದ ಪ್ರಕಾರ ಸರ್ವೆ ನಂ.48ರಲ್ಲಿ ಶ್ರೀ.ಚೆಲುವೇಗೌಡ ಬಿನ್ ಬೆಟ್ಟೇಗೌಡ ರವರು ಅನಧಿಕೃತವಾಗಿ ಅಳವಡಿಸಿದ್ದ ಪೈಪುಗಳ ಬಗ್ಗೆ ನೋಟೀಸ್ ಜಾರಿ ಮಾಡಿದ್ದು, ಸದರಿ ಸರ್ವೆ ನಂಬರುಗಳ ರೈತರು ಪೈಪುಗಳು ಅನಧಿಕೃತ ಎಂಬ ಬಗ್ಗೆ ದಾಖಲಾತಿಗಳನ್ನು ಮಂಡಿಸಿ, ಕ್ರಮ ಜರುಗಿಸಲು ಆಗ್ರಹಪಡಿಸಿದ್ದರಿಂದ, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ದಿ:23/01/14ರಂದು ತಲಕಾಡು ಪೋಲೀಸ್ ಉಪ ನಿರೀಕ್ಷಕರಿಗೆ ಪತ್ರ ಬರೆದಿದೆ. ಸದರಿ ಕ್ರಮಕ್ಕೆ ಪ್ರತಿಯಾಗಿ ಸದರಿ ದೂರನ್ನು ನೀಡಿದ್ದು, ಕುಕ್ಕೂರು ಸರ್ವೆ ನಂ.10/3ರಲ್ಲಿ ಶ್ರೀ.ಚೆನ್ನಶೆಟ್ಟಿ ಬಿನ್ ಲೇ.ಜವರಶೆಟ್ಟಿ ಮತ್ತು ಸರ್ವೆ ನಂ.42ರಲ್ಲಿ ಶ್ರೀ.ಚೆಲುವೇಗೌಡ ಬಿನ್ ಬೆಟ್ಟೇಗೌಡ ರವರು ಅಳವಡಿಸಿರುವ ಪೈಪುಗಳು ಅನಧಿಕೃತ ಎಂದು ಅಭಿಪ್ರಾಯ ಪಡಲಾಗಿದೆಯೆಂದು ಹೇಳಿದ್ದಾರೆ. ಅನಧಿಕೃತವಾಗಿ ತಮ್ಮ ಜಮೀನಿಗೆ ನೀರನ್ನು ಪಡೆಯುತ್ತಿರುವ ರೈತರ ಜಮೀನುಗಳನ್ನು ಅಧಿಕೃತಗೊಳಿಸುವ ಬಗ್ಗೆ ಕರ್ನಾಟಕ

S.J.d/

mps/634/14



ನೀರಾವರಿ ಕಾಯಿದೆ, 1965ರ ಕಲಂ 28ರನ್ವಯ ಕ್ರಮ ಜರುಗಿಸಬಹುದಾಗಿದೆ. ಕಾವೇರಿ ಜಲಾನಯನ ಪ್ರದೇಶದಲ್ಲಿ ಅಚ್ಚುಕಟ್ಟು ಪ್ರದೇಶವನ್ನು ವಿಸ್ತರಿಸುವ ಬಗ್ಗೆ ನಿರ್ಬಂಧ ಇರುವುದರಿಂದ ಕಲಂ 28(5) ಅನ್ವಯ ದಂಡ ಸ್ವರೂಪದ ನೀರಾವರಿ ಕರ ಮತ್ತು ದಂಡ ವಿದಿಸಬಹುದಾಗಿದೆಯೆಂದು ಹೇಳಿದ್ದಾರೆ.

5. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಟಿ.ನರಸೀಪುರ ತಾಲ್ಲೂಕ್ ತಲಕಾಡು ಹೋಬಳಿ ಕುಕ್ಕೂರು ಗ್ರಾಮದ ಸರ್ವೆ ನಂ.10/3, 11 ಮತ್ತು 13 ಜಮೀನಿನ ಮಾಲೀಕರು ಅನಧಿಕೃತವಾಗಿ ಪೈಪುಗಳನ್ನು ಅಳವಡಿಸಿ, ನೀರನ್ನು ಪಡೆಯುತ್ತಿರುವುದು ಎದುರುದಾರರ ಆಕ್ಷೇಪಣೆಯಿಂದ ಕಂಡು ಬಂದಿದೆ, ಕಾರ್ಯಪಾಲಕ ಅಭಿಯಂತರರ ವರದಿಯಲ್ಲಿ ಸರ್ವೆ ನಂ.10/3 ಮತ್ತು 42ರ ರೈತರು ಅನಧಿಕೃತವಾಗಿ ಪೈಪನ್ನು ಅಳವಡಿಸಿರುವುದಾಗಿ ಕಂಡು ಬಂದಿದೆ. ಅನಧಿಕೃತವಾಗಿ ತಮ್ಮ ಜಮೀನುಗಳಿಗೆ ನೀರನ್ನು ಪಡೆಯುತ್ತಿದ್ದಾರೆಂದು ಹೇಳಿದ ರೈತರು/ ಜಮೀನಿನ ಅನುಭವದಾರರ ವಿರುದ್ಧ ಕರ್ನಾಟಕ ನೀರಾವರಿ ಕಾಯಿದೆ, 1965, ಕಲಂ 28ರನ್ವಯ ಕ್ರಮ ಜರುಗಿಸಬಹುದಾಗಿರುವುದರಿಂದ, ಕಲಂ 28(5) ರಡಿ ಅವರಿಂದ ದಂಡ ಸ್ವರೂಪದ ನೀರಾವರಿ ಕರ ಮತ್ತು ದಂಡವನ್ನು ವಸೂಲಿ ಮಾಡಬಹುದಾಗಿದೆ.

6. ಆದ್ದರಿಂದ, ಟಿ.ನರಸೀಪುರ ತಾಲ್ಲೂಕ್ ತಲಕಾಡು ಹೋಬಳಿ ಕುಕ್ಕೂರು ಗ್ರಾಮದ ಸರ್ವೆ ನಂ.10/3, 11 ಮತ್ತು 13 ಜಮೀನಿನ ರೈತರು/ ಅನುಭವದಾರರಿಂದ ದಂಡ ಸ್ವರೂಪದ ನೀರಾವರಿ ಕರ ಮತ್ತು ದಂಡವನ್ನು ವಸೂಲಿ ಮಾಡಲು ಕಾನೂನಿನಡಿ ಸೂಕ್ತ ಕ್ರಮ ಕೈಗೊಳ್ಳುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

7. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

Sd/- 31.1.18

(ನ್ಯಾಯಾಮೂರ್ತಿ ಸುಬಾಷ್ ಬಿ ಅಡಿ)
ಉಪಲೋಕಾಯುಕ್ತ-2,
ಕರ್ನಾಟಕ ರಾಜ್ಯ.

31/01